ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,

ಹಗರಿಬೊಮ್ಮನಹಳ್ಳಿ

ಸಿ ಸಿ ನಂ.1415/2024

ಸಾಕ್ಷಿಗೆ ದಿನಾಂಕ 26-02-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 8 P.W.: 4

| | | |
|---|---|---|
| ಹೆಸರು | : | ಎಸ್ ಗುರುಬಸವರಾಜೇಂದ್ರ |
| ತಂದೆಯ ಹೆಸರು | : | ಎಸ್ ಮಲ್ಲಿಕಾರ್ಜುನ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಅಬಕಾರಿ ಮುಖ್ಯ ಪೇದೆ |
| ವಾಸ ಸ್ಥಳ | : | ಹೆಚ್ ಬಿ ಹಳ್ಳಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 15-07-2024 ರಿಂದ 30-10-2024 ರವರೆಗೆ ಅಬಕಾರಿ ಉಪನಿರೀಕ್ಷಕರು-2 ಇವರ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15-07-2024 ರಂದು ಸದರಿ ಪರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-1 ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ಪ್ರಕರಣದ ಕಡತದೊಂದಿಗೆ ನಾನು ಎಫ್ ಎಸ್ ಎಲ್ ವರದಿ ಮತ್ತು ಖಾತಾ ಉತಾರವನ್ನು ಪಡೆದಿರುತ್ತೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಎಫ್ ಎಸ್ ಎಲ್ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಸಾಕ್ಷಿಯು ಖಾತಾ ಉತಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ದಿಃ30-07-2024 ರಂದು ಕೃತ್ಯಸ್ಥಳದ ಮನೆಯ ಮಾಲೀಕರಾದ ಗುರುಶಾಂತಮ್ಮ ಇವರಿಗೆ ವಿಚಾರಣಾ ನೋಟೀಸನ್ನು ನೀಡಿರುತ್ತೇನೆ. ಅದೇ ದಿನ ಸದರಿ ದಿನ ಠಾಣೆಗೆ ಹಾಜರಾಗಿ ನೀಡಿರುವಂತಹ ಹೇಳಿಕೆ ದಾಖಲಿಸಿಕೊಂಡಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸ್ ಮತ್ತು ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-9 ಮತ್ತು 10 ಎಂದು ಮತ್ತು ಅವುಗಳ ಮೇಲಿರುವ ಸಹಿಗಳನ್ನು ನಿಪಿ-9 ಎ ಮತ್ತು 10 ಎ ಎಂದು ಗುರುತಿಸಲಾಯಿತು. ಸದರಿ ಮನೆ ಗುರುಶಾಂತಮ್ಮ ಇವರ ಮಗನಾದ ಮೃತ ಶಿವಯೋಗಿ ಇವರ ಹೆಸರಿನಲ್ಲಿತ್ತು ಅವರ ಮರಣ ಪ್ರವಮಾಣಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಮತ್ತು ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು. ದಿಃ30-07-2024 ರಂದು ಆರೋಪಿತನ ಸ್ವಖುಷಿ ಹೇಳಿಕೆಯನ್ನು ಪಡೆದಿರುತ್ತೇನೆ. ನಾನು ಆರೋಪಿತನ ಸ್ವಖುಷಿ

ಹೇಳಿಕೆ ಪಡೆಯುವ ಪೂರ್ವದಲ್ಲಿ ಆರೋಪಿತನು ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದು ಇತ್ತು. ದಿಃ30-07-2024 ರಂದು ಪಂಚರಾದ ಚಾಸಾ-2, 3 ದಾಳಿಯಲ್ಲಿ ಪಾಲ್ಗೊಂಡಂತಹ ಚಾಸಾ-4 ಮತ್ತು 5 ರವರ ಹೇಳಿಕೆ ಪಡೆದಿರುತ್ತೇನೆ. ಆರೋಪಿತನ ವಿರುದ್ಧ ದೋಷಾರೋಪಣೆ ಸಾಬೀತಾಗಿದ್ದರಿಂದ ಅವನ ವಿರುದ್ಧ ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ. ಸಾಕ್ಷಿಯು ಮು ಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು. ಆರೋಪಿ ಪರ ಶ್ರೀ ಎಸ್ ಎಲ್ ಆರ್ ಜಿ ವಕೀಲರಿಂದಃ-</u>

ಚಾಸಾ-1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಇಲಾಖೆ ಅಂಕಿ ಸಂಖೆ ಸಲುವಾಗಿ ಚಾಸಾ-1 ರವರು ದಾಖಲಿಸಿರುವಂತಹ  ಸುಳ್ಳು ಪ್ರ ವ ವರದಿ ಗೆ ಅನುಕೂಲವಾಗುವ ರೀತಿಯಲಿಲ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾವು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಮತ್ತು ಆರೋಪಿತನು ನಮ್ಮ ಮುಂದೆ ಸ್ವಖುಷಿ ಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ. ಆರೋಪಿಗೂ ಮು ಮಾಲುಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ. ಗುರುಶಾಂತಮ್ಮ ಇವರಿಗೆ ವಿಚಾರಣಾ ನೋಟೀಸ್ ನೀಡಿದ್ದೇನೆ ಅವರಿಂದ ಸ್ವಖುಷಿ ಹೇಳಿಕೆ ಮತ್ತು ದಾಖಲೆ ಪಡೆದಿದ್ದೇನಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮು ಮಾಲುಗಳ ಬ್ಯಾಚ್ ನಂ., ಉತ್ಪಾದನಾ ದಿನಾಂಕ ಮತ್ತು ಕ್ರಮ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ.  ಚಾಸಾ-1 ರವರು ನಮ್ಮ ಮೇಲಾಧಿಕಾರಿಯಾಗಿರುವುದರಿಂದ ಆರೋಪಿತನು ಯಾವುದೇ ತಪ್ಪು ಮಾಡಲಿಲ್ಲವಾದರೂ ಆರೋಪಿತನ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ